ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತಾಗಿದೆ ಕೇಂದ್ರದ ನಿರ್ಧಾರ: ಕಮ್ಮರಡಿ

# ನೋಟು ರದ್ದತಿ ರೈತರನ್ನು ಸಂಕಷ್ಟಕ್ಕೆ ದೂಡಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಪ್ಪು ಹಣ ಇಟ್ಟುಕೊಂಡಿರುವ ಶ್ರೀಮಂತರು ನೆಮ್ಮದಿಯಿಂದ ಇದ್ದಾರೆ. ಆದರೆ, ಕಷ್ಟ ಆಗುತ್ತಿರುವುದು ಮಾತ್ರ ದುಡಿಯುವ, ಕೃಷಿ ವರ್ಗಕ್ಕೆ. ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕಿದಂತೆ ಆಗಿದೆ ಕೇಂದ್ರ ಸರ್ಕಾರದ ನೋಟು ರದ್ದತಿ ಆದೇಶ' ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು.

ನಗರದಲ್ಲಿ ಗುರುವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ 'ನೋಟು ರದ್ದತಿ' ಕುರಿತು ಹಮ್ಮಿಕೊಂಡಿದ್ದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಹಣ ಇದ್ದವರನ್ನು ನೇರವಾಗಿ ದಂಡಿಸಲು ಆಗದ ಸರ್ಕಾರ ಸಾಮಾನ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ರಾಜ್ಯದಲ್ಲಿ ಬರದಿಂದ ಬೆಳೆಯೂ ಇಲ್ಲ, ಬೆಲೆಯೂ ಇಲ್ಲದ ಸ್ಥಿತಿ ಇದೆ. ಶೇ 50ರಷ್ಟು ಬೆಳೆ ಹಾನಿಯಾಗಿದೆ. ಈಗಾಗಲೇ ಈರುಳ್ಳಿ ಬೆಲೆ ನೆಲಕಚ್ಚಿದೆ. ಇನ್ನೂ ಶೇಂಗಾದ ಬೆಲೆಯೂ ಬಿದ್ದು ಹೋಗಲಿದೆ. ಈ ಸಂಕಷ್ಟದ ನಡುವೆ ನೋಟು ರದ್ದತಿಯಿಂದ ರೈತರು ಕಂಗಾಲಾಗಿದ್ದಾರೆ' ಎಂದು ಹೇಳಿದರು.



ಕೋಡಿಹಳ್ಳಿ ಚಂದ್ರಶೇಖರ್, ಪ್ರಕಾಶ ಕಮ್ಮರಡಿ, ಯಶೋದಮ್ಮ ಹಾಗೂ ವಿವೇಕ್ ಮಲ್ಯ ಉಪಸ್ಥಿತರಿದ್ದರು

'ರೈತರಿಗೆ ಅನುಕೂಲವಾಗುವಂತೆ ಎಪಿಎಂಸಿ ಬ್ಯಾಂಕ್‌ಗಳಿಗೆ ಹೆಚ್ಚು ಹಣವನ್ನು ಆರ್‌ಬಿಐ ನೀಡಬೇಕು. ಅಲ್ಲದೆ ಎಪಿಎಂಸಿಯಲ್ಲಿ ಮಾರಾಟವಾದ ಪೂರ್ತಿ ಹಣ ಅವರ ಕೈಗೆ ಸಿಗುವಂತಾಗಬೇಕು. ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆಯುತ್ತೇನೆ' ಎಂದು ತಿಳಿಸಿದರು.

'ಈಗ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಂಗ್ರಹವಾಗಿರುವ ₹80 ಲಕ್ಷ ಕೋಟಿ ಹಣದಲ್ಲಿ ಸಾಲ ಮನ್ನಾ, ನೀರಾವರಿ ಸೌಲಭ್ಯ ಹೀಗೆ ರೈತರಿಗೆ ಅನುಕೂಲ ಆಗುವ ಯೋಜನೆಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಕೋಡಿಹಳ್ಳಿ ಚಂದ್ರಶೇಖರ್ ಅವರು ಮಾತನಾಡಿ, 'ಕೃಷಿ ಉತ್ಪನ್ನಗಳ ಬೆಲೆ ಬಿದ್ದು ಹೋಗಿದೆ. ರೈತರೊಬ್ಬರು ಸಿಟಿ ಮಾರುಕಟ್ಟೆಗೆ ತೆಗೆದುಕೊಂಡು ಬಂದ ಸೊಪ್ಪು, ಮಾರಾಟವಾಗದೆ ವಾಪಸ್ ತೆಗೆದುಕೊಂಡು ಹೋಗಿದ್ದಾರೆ. ಬಡವರು ಸಂಯಮದಿಂದ ಕಷ್ಟವನ್ನು ಸಹಿಸಿಕೊಳ್ಳುತ್ತಿದ್ದಾರೆ. ಅವರಿಗೆ ಸರ್ಕಾರ ನಿರಾಸೆ ಮಾಡಬಾರದು' ಎಂದು ಹೇಳಿದರು.

ಲೆಕ್ಕ ಪರಿಶೋಧಕ ವಿವೇಕ್ ಮಲ್ಯ ಅವರು ಮಾತನಾಡಿ, 'ಸರ್ಕಾರದ ಒಂದು ನಿರ್ಣಯದ ಮೇಲೆ ಇಡೀ ದೇಶ ಇಕ್ಕಟ್ಟಿನಲ್ಲಿ ಸಿಲುಕಿದೆ. ನಮ್ಮ ದೇಶದಲ್ಲಿ ನೋಟಿನ ರೂಪದಲ್ಲಿರುವ ಹಣಕ್ಕೆ ಮಾತ್ರ ತೊಂದರೆ ಆಗಲಿದೆ. ಹೀಗೆ ಸರ್ಕಾರದ ಬಳಿ ಸಂಗ್ರಹಗೊಂಡಿರುವ ಹಣವನ್ನು ರೈತರು ಕೇಳಬೇಕು. ಇಲ್ಲದಿದ್ದರೆ ಅದನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಸಾಲದ ರೂಪದಲ್ಲಿ ಕರಗಿ ಹೋಗುತ್ತದೆ' ಎಂದು ಹೇಳಿದರು.

'ಮುದ್ರಣಾಲಯದಿಂದ ಜನರ ಜೇಬಿಗೆ ನೋಟು ತಲುಪುವುದಕ್ಕೆ ಬಹಳ ಸಮಯ ಹಿಡಿಯುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರ ಕೇಂದ್ರದಿಂದ ಹಣ ಪಡೆದು ಸರ್ಕಾರಿ ನೌಕರರಿಗೆ ಐದು ತಿಂಗಳ ಸಂಬಳವನ್ನು ಒಮ್ಮೆಗೆ ನೀಡಿದರೆ ಹಣದ ಚಲಾವಣೆ ಹೆಚ್ಚುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಒಮ್ಮತದಿಂದ ಕೆಲಸ ಮಾಡಿದರೆ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ನಗರದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ನಡೆದ ನೋಟು ರದ್ದತಿಯ ಪರಿಣಾಮಗಳು ಕುರಿತ ಸಂವಾದ ಕಾರ್ಯಕ್ರಮದಲ್ಲಿ ಕೋಡಿಹಳ್ಳಿ ಚಂದ್ರಶೇಖರ್, ಪ್ರಕಾಶ್ ಕಮ್ಮರಡಿ ಹಾಗೂ ಇತರರು ಭಾಗವಹಿಸಿದ್ದರು.